# ಮೀಯಾಜಾಕಿ ಬಲು ದುಬಾರಿ



ಹಣ್ಣುಗಳ ರಾಜ ಅಂದ್ರೆ ಮಾವು. ಈಚೆಗೆ ಕೊಪ್ಪಳದಲ್ಲಿ ನಡೆದ ಮಾವಿನ ಮೇಳದಲ್ಲಿ ವಿಶೇಷ ಮಾವೊಂದು ಎಲ್ಲರ ಗಮನ ಸೆಳೆಯಿತು. ಅದೇ ಜಗತ್ತಿನ ಅತ್ಯಂತ ದುಬಾರಿ ಮಾವು 'ಮೀಯಾಜಾಕಿ'. ಈ ಹಣ್ಣು ಪ್ರತಿ ಕೆ.ಜಿ.ಗೆ 2.50 ಲಕ್ಷ ರೂಪಾಯಿ. ಅಂದರೆ ಒಂದು ಹಣ್ಣಿನ ಬೆಲೆ ಸರಿಸುಮಾರು 40 ಸಾವಿರ ರೂಪಾಯಿ. ಮಾವು ಬೆಳೆಯುವ ಕೊಪ್ಪಳ ಜಿಲ್ಲೆಯ ರೈತರಿಗೆ ತಳಿ ಪರಿಚಯಿಸುವ ಉದ್ದೇಶದಿಂದ ಈ ಹಣ್ಣನ್ನು ಖರೀದಿಸಿ ಪ್ರದರ್ಶನಕ್ಕೆ ಇಡಲಾಗಿತ್ತು. ಇಲ್ಲಿಟ್ಟಿದ್ದ ಮೀಯಾಜಾಕಿ ಅಂದಾಜು 350 ಗ್ರಾಂ ತೂಕವಿತ್ತು. ಮೀಯಾಜಾಕಿ ಹಣ್ಣಾಗುವಾಗ ವಿಶೇಷ ಬಣ್ಣಕ್ಕೆ ತಿರುಗುತ್ತದೆ. ಆರಂಭದಲ್ಲಿ ಅದರ ಬಣ್ಣ ನೇರಳೆ. ತನ್ನ ಗರಿಷ್ಠ ಪಕ್ವತೆಯನ್ನು ತಲುಪಿದ ನಂತರ ಅದು ಕೆಂಪು ಬಣ್ಣಕ್ಕೆ ತಿರುಗುತ್ತದೆ.

ಜಪಾನ್ ಮೂಲದ ಈ ಹಣ್ಣು ಔಷಧೀಯ ಗುಣಗಳನ್ನು ಹೊಂದಿದೆಯಂತೆ. ಮೀಯಾಜಾಕಿ ಹಣ್ಣಿನ ಒಂದು ಸಸಿಗೆ 15 ಸಾವಿರ ರೂಪಾಯಿಯಂತೆ. ಮಿಯಾಜಾಕಿ ಇದೀಗ ಭಾರತದಲ್ಲೂ ಲಭ್ಯವಿದ್ದು, ಪಶ್ಚಿಮ ಬಂಗಾಳದ ಬಿರ್ಭಮ್ ಜಿಲ್ಲೆಯ ದುಬ್ರಾಜಪುರದ ಮಶೀದಿಯೊಂದರ ಬಳಿ ಬೆಳೆಯುತ್ತಿರುವುದಾಗಿ ವರದಿಯಾಗಿದೆ. ಈ ಮಾವು ಮೇಳದಲ್ಲಿ ಮೌಲ್ಯವರ್ಧಿತ ಉತ್ಪನ್ನಗಳಾದ ಮ್ಯಾಂಗೋ ರೋಲ್, ಮ್ಯಾಂಗೋ ಸ್ಪೈಸ್, ಮ್ಯಾಂಗೋ ಪಲ್ಪ್, ಮಾವಿನ ಶ್ರೀಖಂಡ ಹಾಗೂ ಇತರ ಉತ್ಪನ್ನಗಳನ್ನು ಸಹ ಮಾರಾಟಕ್ಕೆ ಇಡಲಾಗಿತ್ತು.

–ಡಾ. ಕರವೀರಪ್ರಭು ಕ್ಯಾಲಕೊಂಡ, ಬಾದಾಮಿ

# ಒಂದು ಹೂವು ಎರಡು ಬಣ್ಣ

ನಮ್ಮ ಮನೆಯ ಕೈತೋಟದಲ್ಲಿ ಅರಳಿದ ದಾಸವಾಳದ ಹೂವು ಎರಡು ರೀತಿಯ ಬಣ್ಣ ಹೊಂದಿದ್ದನ್ನು ಕಂಡು ಅಚ್ಚರಿಗೊಂಡೆ. ಪರೀಕ್ಷಿಸಲೆಂದೇ ಇನ್ನೆರಡು ದಿನ ಬಿಟ್ಟು ನೋಡಿದೆ. ಆಗಲೂ ಮತ್ತೆ ಅದೇ ರೀತಿಯ ಹೂವು ಬಿಟ್ಟಿದ್ದು ನನ್ನ ಕುತೂಹಲ ಹೆಚ್ಚಿಸಿತು. ಗೊತ್ತಿದ್ದ ಸಸ್ಯಶಾಸ್ತ್ರಜ್ಞರನ್ನು ವಿಚಾರಿಸಿದಾಗ ಅವರಿಂದ ಬಂದ ಉತ್ತರ, 'ಕಸಿ ಮಾಡಿದ್ದರಿಂದ ಈ ರೀತಿಯ ಹೂವು ಬಿಟ್ಟಿದೆ' ಎಂದರು. ವಾಸ್ತವವಾಗಿ ಅದು ಕಸಿ ಮಾಡಿದ ಗಿಡವಾಗಿರಲಿಲ್ಲ. ನೈಸರ್ಗಿಕವಾಗಿಯೇ ಈ ರೀತಿಯ ಹೂವು ಬಿಟ್ಟಿದೆ ಅಂದುಕೊಂಡೆ. ನಮ್ಮಮ್ಮ ದಾಸವಾಳದ 2 ಗಿಡಗಳನ್ನು ಅಕ್ಕಪಕ್ಕ ನೆಟ್ಟಿದ್ದರು. ಅದರಲ್ಲಿ ಒಂದು ತಿಳಿಹಳದಿ ಬಣ್ಣದ್ದು, ಇನ್ನೊಂದು ತಿಳಿ ಕೇಸರಿ ಬಣ್ಣದು. ಅವುಗಳು ಬೆಳೆದ ನಂತರ ನೈಸರ್ಗಿಕವಾಗಿ ಈ ರೀತಿಯ ಹೂವುಗಳು ಅರಳುತ್ತಿವೆ ಎಂದು ಅಂದಾಜಿಸಿದೆ. ತಿಳಿ ಹಳದಿ ಹಾಗೂ ತಿಳಿ ಕೇಸರಿ ಬಣ್ಣದ ಈ ಸಮ್ಮಿಲನ ನೋಡಲು ಸೊಗಸಾಗಿ ಕಾಣುತ್ತಿದೆ.



–ಅಂಜನ್ ಕಾಯ್ಕಿಣಿ, ಸಾಗರ



# ನಿರ್ಜೀವ ಸಿಂಹಕ್ಕೂ ಬೋನು

ಸಾಮಾನ್ಯವಾಗಿ ದೇವಸ್ಥಾನಗಳ ಗರ್ಭಗುಡಿಯನ್ನು ಪೂಜಾ ಸಮಯದಲ್ಲಿ ಹೊರತುಪಡಿಸಿ ಉಳಿದ ಸಮಯದಲ್ಲಿ ಬೀಗ ಹಾಕಿರುವುದನ್ನು ಕಾಣುತ್ತೇವೆ. ಸ್ವಚ್ಛತೆ ಹಾಗೂ ಪಾವಿತ್ರ್ಯ ಕಾಪಾಡಲು ಈ ರೀತಿ ಮಾಡಲಾಗುತ್ತದೆ. ಆದರೆ ಚಿತ್ರದಲ್ಲಿ ದೇವಸ್ಥಾನದ ಮುಂಭಾಗದಲ್ಲಿನ ಸಿಂಹದ ಮೂರ್ತಿಗಳನ್ನು ಸಹ ಜಾಲರಿಯೊಳಗಿರಿಸಿ ಬೀಗ ಹಾಕಲಾಗಿದೆ! ಚಿಕ್ಕ ಮಕ್ಕಳು ಮೂರ್ತಿಗಳನ್ನು ಏರಬಾರದೆಂದೋ ಅಥವಾ ಅವುಗಳನ್ನು ಗಲೀಜು ಮಾಡದಿರಲೆಂದೋ ಈ ರೀತಿಯಲ್ಲಿ ಜಾಲರಿಯಲ್ಲಿ ಬಂಧಿಸಿರಬಹುದು. ಅಂದಹಾಗೆ ಹೀಗೆ ಜಾಲರಿಯೊಳಗಿನ ಸಿಂಹದ ಮೂರ್ತಿಗಳು ವಿಜಯನಗರ ಜಿಲ್ಲೆ ಹಗರಿಬೊಮ್ಮನಹಳ್ಳಿ ತಾಲ್ಲೂಕಿನ ಮೋರಿಗೇರಿ ಗ್ರಾಮದ ಹೊರವಲಯದಲ್ಲಿದೆ. 'ಮರಡಿ ದುರ್ಗಮ್ಮ' ಎಂದು ಪ್ರಸಿದ್ಧವಾದ ದೇವಿಯ ಜಾತ್ರೆಯು, ಆರಂಭವಾಗಿ ಕೇವಲ ಎರಡರಿಂದ ಮೂರು ತಾಸುಗಳಲ್ಲಿ ಮುಗಿದುಹೋಗುತ್ತದೆ. ಮಣ್ಣಿನ ಗುಡ್ಡದಲ್ಲಿ ನಡೆಯುವ ಈ ಜಾತ್ರೆಗೆ ಸಹಸ್ರಾರು ಭಕ್ತರು ಆಗಮಿಸುತ್ತಾರೆ. ಆದರೆ ಜಾತ್ರೆ ಆರಂಭವಾಗಿ ಕೆಲವೇ ತಾಸುಗಳಲ್ಲಿ ಗುಡ್ಡದ ಮೇಲೆ ಜನರೇ ಇರುವುದಿಲ್ಲ! ಇದು ಸಹ ಇಲ್ಲಿನ ಮತ್ತೊಂದು ವಿಶೇಷ.

–ಮಹೇಶ್ವರ ಹುರುಕಡ್ಲಿ, ಬಾಚಿಗೊಂಡನಹಳ್ಳಿ